ಈ ದಿನ ದಿನಾಂಕಃ 16-12-2024 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**<u>ಪಾಟೀಸವಾಲು 02ನೇ ಪ್ರತಿವಾದಿ ಪರ ಶ್ರೀ ಎಸ್ ಪಿ ವಕೀಲರಿಂದಃ</u>**

ನಾನು ಅನಕ್ಷರಸ್ಥ, ಆದರೆ ಸಹಿಯನ್ನು ಅಕ್ಷರಗಳಲ್ಲಿ ಮಾಡುತ್ತೇನೆ. ದಾವೆಯನ್ನು ಯಾರು ಯಾರ ಮೇಲೆ ಸಲ್ಲಿಸಿದ್ದಾರೆ ಎಂದು ಮಾಹಿತಿ ಇಲ್ಲ. ಯಾವ ವಿಚಾರಕ್ಕೆ ಸಲ್ಲಿಸಿದ್ದಾರೆ ಎಂದು ಮಾಹಿತಿ ಇಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರ ನನಗೆ ಗೊತ್ತು ಆದರೆ ಓದಲು ಬರುವುದಿಲ್ಲ. ಪಾರ್ವತಮ್ಮ ನವರು ರಾಜಪ್ಪ ನವರನ್ನು ದತ್ತಕ ಪಡೆದ ಪತ್ರ ನೋಡಿಲ್ಲ. ರಾಜಪ್ಪ ನನ್ನ ಸ್ವಂತ ತಮ್ಮ . ಆತನ ಮಗನೇ ಈ ಪ್ರಕರಣದ ವಾದಿ . ದಾವಾ ಸ್ವತ್ತು ಮೂಲತಃ ನನ್ನ ಅಜ್ಜಿ ಪಾರ್ವತಮ್ಮನಿಗೆ ಸೇರಿದ್ದು. ಆಕೆಗೆ ಒಟ್ಟು 6 ಜಮೀನುಗಳು ಇದ್ದವು. ಸರ್ವೆ ನಂಬರ್ ನನಗೆ ಹೇಳಲು ಬರುವುದಿಲ್ಲ.

2. ನಮ್ಮ ಅಜ್ಜಿಯ ಮೃತ್ಯು ಪತ್ರದ ಆಧಾರದಲ್ಲಿ ದಾವಾ ಸ್ವತ್ತುಗಳು ನಮ್ಮ ಅಣ್ಣ ರಾಜಪ್ಪ ನಿಗೆ ಪ್ರಾಪ್ತವಾಗಿರುತ್ತವೆ. ದಾವಾ ಸ್ವತ್ತಿನ ಸರ್ವೆ ಸಂಖ್ಯೆ ಗೊತ್ತಿಲ್ಲ. ಸದರಿ ಆಸ್ತಿಯಲ್ಲಿ 45 ವರುಷಗಳಿಂದ ಎರಡು ಮನೆಗಳಿವೆ ಎಂದರೆ ಸರಿಯಲ್ಲ. ಮೊದಲು ಒಂದು ಗುಡಿಸಲು ಇತ್ತು. ಪಾರ್ವತಮ್ಮ ತನ್ನ ಜೀವಿತಾವಧಿಯಲ್ಲಿ ಆಸ್ತಿಗಳನ್ನು ಮಾರಾಟ ಮಾಡಿದ ದಾಖಲೆ ನೋಡಿಲ್ಲ ಮತ್ತು ಗೊತ್ತಿಲ್ಲ ಆಕೆಯ ಮರಣ ದಿನಾಂಕ ಗೊತ್ತಿಲ್ಲ.

3. ಮರಣ ಶಾಸನವನ್ನು ನಮ್ಮ ಅಣ್ಣ ರಾಜಪ್ಪನವರಿಗೆ ಬರೆದುಕೊಡಲಾಗಿತ್ತು. ಪಾರ್ವತಮ್ಮ ನವರಿಗೆ ಮರಣ ಶಾಸನ ಬರೆಯುವ ಇಚ್ಚೆ ಇರಲಿಲ್ಲ, ನಾನು ಮತ್ತು ನನ್ನ ಸಹೋದರರು ಸೇರಿ ದಾಖಲೆಯನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಭೂ ಪರಿವರ್ತನೆ ಮಾಡಿ

ಪಾರ್ವತಮ್ಮ ಹಾಲಪ್ಪ ನವರಿಗೆ ಮಾರಾಟ ಮಾಡಿದ ವಿಚಾರ ಗೊತ್ತಿಲ್ಲ ಆ ವಿಚಾರವನ್ನು ವಾದಿಯಿಂದ ತಿಳಿದುಕೊಂಡೆ. ಸದರಿಯವರಿಗೆ 1986-87ನೇ ಸಾಲಿನಲ್ಲಿ 42 x 70 ಅಡಿಗಳ ನಿವೇಶವನ್ನು ಮಾರಟ ಮಾಡಲಾಗಿದೆ ಎಂದರೆ ಗೊತ್ತಿಲ್ಲ . ಸದರಿ ಕ್ರಯದಾರರು ಮನೆಗಳನ್ನು ಕಟ್ಟಿಕೊಂಡು ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಗೊತ್ತಿಲ್ಲ. ಸದರಿಯವರ ಹೆಸರಿಗೆ ಪಂಚಾಯತಿ ದಾಖಲೆಗಳಿದ್ದ ಬಗ್ಗೆ ಮಾಹಿತಿ ಇಲ್ಲ. ಆರ್ ಹಾಲಪ್ಪ ನವರ ಮರಣದ ನಂತರದಲ್ಲಿ ಅವರ ಮಕ್ಕಳ ಹೆಸರಿಗೆ ದಾಖಲೆಗಳು ಬದಲಾವಣೆ ಆದ ವಿಚಾರ ಗೊತ್ತಿಲ್ಲ.

4. ನಾನು ಗ್ರಾಮದಲ್ಲಿ ಹೆಚ್ಚಾಗಿ ವಾಸವಿಲ್ಲ ಆದ್ದರಿಂದ ಊರಿನ ಸಂಪೂರ್ಣ ವಿಚಾರಗಳು ನನಗೆ ಗೊತ್ತಿಲ್ಲ. 2ನೇ ಪ್ರತಿವಾದಿ ಹಾಲಪ್ಪ ನವರ ಮಕ್ಕಳಿಂದ ಕ್ರಯಕ್ಕೆ ಪಡೆದ ವಿಚಾರ ನನಗೆ ಗೊತ್ತಿಲ್ಲ. ಅವರು ಹಳೆ ಮನೆ ಕೆಡವಿ 2ನೇ ಪ್ರತಿವಾದಿ ಆರ್ ಸಿ ಸಿ ಮನೆಯನ್ನು 20198 ರಲ್ಲಿ ಕಟ್ಟಿದ ವಿಚಾರ ಗೊತ್ತೇ ಎಂಬ ಪ್ರಶ್ನೆಗೆ ಸಾಕ್ಷಿ ನಮ್ಮ ಅಜ್ಜಿಯ ಜಾಗದಲ್ಲಿದ್ದ ಗುಡಿಸಲನ್ನು ಕೆಡವಿ 1 ಮತ್ತು 2 ನೇ ಪ್ರತಿವಾದಿಗಳು ಎರಡು ಆರ್ ಸಿ ಸಿ ಮನೆಗಳನ್ನು ಕಟ್ಟಿಕೊಂಡಿದ್ದನ್ನು ನೋಡಿದ್ದೇ ನೆ ಎಂದು ನುಡಿಯುತ್ತಾರೆ. ಕಂದಾಯ ದಾಖಲೆಗಳ ಬದಲಾವಣೆ ಆಗದ್ದನ್ನು ದುರುಪಯೋಗ ಮಾಡಿಕೊಂಡು ನಾನು ಮತ್ತು ನನ್ನ ಅಣ್ಣ ಮರಣ ಶಾಸನವನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಅಣ್ಣನ ಹೆಸರಿಗೆ ಮರಣ ಶಾಸನ ಆಗಿಲ್ಲ ಎಂದರೆ ಸರಿಯಲ್ಲ. ಮರಣ ಶಾಸನವನ್ನು ನಮ್ಮ ಅಣ್ಣನ ಹೆಂಡತಿ ಹೆಸರಿಗೆ ಮೋಸದಿಂದ ಬರೆಸಿದ್ದೇವೆ ಎಂದರೆ ಸರಿಯಲ್ಲ. ಅದರನ್ವಯ ನಮ್ಮ ಅಣ್ಣನ ಮಕ್ಕಳು ಪ್ರತಿವಾದಿಗಳಿಗೆ ಮೋಸ ಮಾಡಲು ವಿಭಾಗ ಪತ್ರ ಸೃಷ್ಟಿಸಿದ್ದಾರೆ ಎಂದರೆ ಸರಿಯಲ್ಲ. ವಾದಿಯ ಪರವಾಗಿ ನಾನು ಸುಳ್ಳು ಸಾಕ್ಷಿ ನುಡಿಯಲು ಬಂದಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ದಾವಾ ಸ್ವತ್ತಿನಲ್ಲ್ 40 ವರುಷಗಳಿಂದ ಮನೆಗಳನ್ನು ಕಟ್ಟಿಕೊಂಡು ವಾಸವಾಗಿದ್ದಾರೆ ಎಂದರೆ ಸರಿಯಲ್ಲ.

**<u>ಪಾಟೀಸವಾಲು 01ನೇ ಪ್ರತಿವಾದಿ ಪರ ಶ್ರೀ ವೈ ಎಂ ಆರ್ ವಕೀಲರಿಂದಃ</u>**

5. ನಾನು ಅನಕ್ಷರಸ್ಥ ನಾಗಿದ್ದು ಸಹಿಯನ್ನು ಅಕ್ಷರಗಳಲ್ಲಿ ಮಾಡುತ್ತೇನೆ ಆದ್ದರಿಂದ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

ಅದನ್ನು ಯಾರು ಬರೆದಿದ್ದಾರೆ ಎಂದು ಗೊತ್ತಿಲ್ಲ ಆದರೆ ಮರಣ ಶಾಸನದ ವಿಚಾರ ನನಗೆ ಗೊತ್ತು. ಮರಣ ಶಾಸನದ ವಿಚಾರಗಳನ್ನು ನಾನು ಓದಿ ತಿಳಿದುಕೊಂಡಿಲ್ಲ. ಅದರಲ್ಲಿನ ಆಸ್ತಿಗಳ ಸರ್ವೆ ನಂಬರ್ ನನಗೆ ಗೊತ್ತಿಲ್ಲ, ವಿಸ್ತೀರ್ಣ ಗೊತ್ತಿಲ್ಲ. ಚಕ್ಕು ಬಂದಿ ಗೊತ್ತು. ಪೂರ್ವಕ್ಕೆ ಕೆಂಚಪ್ಪ ನವರ ಜಾಗ , ಪಶ್ಚಿಮಕ್ಕೆ ಹಾಗೂ ಉತ್ತರಕ್ಕೆ ದೇವರ ಜಮೀನು , ದಕ್ಷಿಣಕ್ಕೆ ರಸ್ತೆ.

6. 1ನೇ ಪ್ರತಿವಾದಿಯ ಮನೆ ನೋಡಿದ್ದೇನೆ. ಲಕ್ಷ್ಮಮ್ಮ ನವರ ಮನೆಯ ಪೂರ್ವಕ್ಕೆ ನಮ್ಮ ಅಜ್ಜಿಯ ಹಾಗೂ ಕೆಂಚಮ್ಮ ನವರ ಆಸ್ತಿ ಇರುತ್ತದೆ. ಪಶ್ಚಿಮಕ್ಕೆ ದೇವರ ಜಮೀನು ಇದೆ. ಉತ್ತರಕ್ಕೆ ನಮ್ಮ ಅಣ್ಣನವರ ಜಮೀನು , ದಕ್ಷಿಣಕ್ಕೆ ರಸ್ತೆ. ಆ ಚಕ್ಕು ಬಂದಿಯಲ್ಲಿ ನಮ್ಮ ಅಜ್ಜಿ ಗುಡಿಸಲು ಇತ್ತು ಅದನ್ನು ಕೆಡವಿ ಪ್ರತಿವಾದಿಗಳು ಮನೆ ಕಟ್ಟಿಕೊಂಡಿದ್ದಾರೆ. ನನಗೆ ಬುದ್ದಿ ಬಂದಾಗಿನಿಂದಲೂ ಅಲ್ಲಿ ಮನೆ ಇದೆ ಎಂದು ಸಾಕ್ಷಿ ನುಡಿದು 15 ವರುಷಳ ಹಿಂದೆ ಮನೆಯನ್ನು ಕಟ್ಟಿದ್ದಾರೆ ಎಂದು ಪುನಃ ನುಡಿಯುತ್ತಾರೆ. ಆ ಮನೆ ನಮ್ಮ ಅಜ್ಜಿಯ ಆಸ್ತಿಯುಲ್ಲಿ ಬರುತ್ತದೆ , ದಾಖಲೆ ನೋಡಿಲ್ಲ. ವಾದಿ ನನ್ನ ಅಣ್ಣನ ಮಗನಾಗಿದ್ದು ಆತನ ಕೋರಿಕೆಯಂತೆ ನಾನು ಸಾಕ್ಷಿ ನುಡಿಯಲು ಬಂದಿದ್ದೇನೆ. ಪ್ರಮಾಣ ಪತ್ರವನ್ನು ವಾದಿಯೇ ತಯಾರು ಮಾಡಿಸಿದ್ದಾನೆ ಎಂದರೆ ಸಾಕ್ಷಿ ಅವರು ಓದಿಕೊಂಡಿರುತ್ತಾರೆ ಹಾಗಾಗಿ ಮಾಡಿಸಿರುತ್ತಾರೆ ಎಂದು ನುಡಿಯುತ್ತಾರೆ. ಅದಕ್ಕೆ ಸಹಿ ಹಾಕಿ ನಾನು ಸಲ್ಲಿಸಿರುತ್ತೇನೆ ಅದರಲ್ಲಿನ ವಿಚಾರಗಳ ವೈಯಕ್ತಿಕ ಮಾಹಿತಿ ಇಲ್ಲ.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.